**2017ರ ಕರ್ನಾಟಕ ಅಧಿನಿಯಮ ಸಂಖ್ಯೆ: 04**

# ಕರ್ನಾಟಕ ಕೆಲವು ಸ್ಥಳಗಳ ಹೆಸರುಗಳನ್ನು ಬದಲಾಯಿಸುವ ಅಧಿನಿಯಮ, 2016

## ಪ್ರಕರಣಗಳ ಪಟ್ಟಿ

**ಪ್ರಕರಣಗಳು:**


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆ
3. ಹೆಸರುಗಳ ಬದಲಾವಣೆ
4. ಉಲ್ಲೇಖಗಳ ಅರ್ಥೈಸುವಿಕೆ
5. ಸಿಂಧುತ್ವ ಮತ್ತು ಉಳಿಸುವಿಕೆಗಳು


## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**2017ರ ಅಧಿನಿಯಮ ಸಂಖ್ಯೆ 04.–** ದಿನಾಂಕ:31.10.2014ರ ಅಧಿಸೂಚನೆ ಸಂಖ್ಯೆ: ಆರ್‌ಡಿ 03 ಟಿಎನ್‌ವಿ 2006ರ ಅನ್ವಯ (ಅನುಬಂಧ–1) ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯು ಕರ್ನಾಟಕದ ಹನ್ನೆರಡು ಸ್ಥಳಗಳ ಹೆಸರುಗಳನ್ನು ಬದಲಾಯಿಸಿದೆ. ಭಾರತ ಸರ್ಕಾರದ ಗೃಹ ಮಂತ್ರಾಲಯದ ದಿನಾಂಕ:17.10.2014ರ ಪತ್ರ ಸಂಖ್ಯೆ: 11/30/2006–ಎಂ ಮತ್ತು ಜಿ ಹಾಗೂ ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಮಂತ್ರಾಲಯದ ದಿನಾಂಕ:30.08.2013ರ ಅಧಿಕೃತ ಜ್ಞಾಪನ ಸಂಖ್ಯೆ: ಎಸ್‌ಎಮ್/28/04/2007ರ ಅನ್ವಯ ಆಡಳಿತ ಇಲಾಖೆಯು ಈ ಬದಲಾವಣೆಗೆ ಕೇಂದ್ರ ಸರ್ಕಾರದಿಂದ ನಿರಾಕ್ಷೇಪಣೆಯನ್ನು ಪಡೆದಿರುತ್ತದೆ. ಆದರೆ ಕರ್ನಾಟಕದಲ್ಲಿ ಜಾರಿಯಲ್ಲಿರುವ ಹಲವಾರು ಕಾನೂನುಗಳಲ್ಲಿ ಸ್ಥಳಗಳ ಹೆಸರುಗಳು ಬದಲಾವಣೆಯಾಗದೇ ಹಾಗೆಯೇ ಉಳಿದಿರುತ್ತವೆ. ಆದುದರಿಂದ, ಕೆಲವು ಸ್ಥಳಗಳ ಹೆಸರುಗಳ ಬದಲಾವಣೆಯ ಅರ್ಥೈಸುವಿಕೆಗಾಗಿ, ಸಿಂಧುತ್ವಕ್ಕಾಗಿ ಮತ್ತು ಉಳಿಸುವಿಕೆಗಾಗಿ ಇದನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದುದರಿಂದ, ಈ ವಿಧೇಯಕ.

(2016ರ ವಿಧಾನಸಭೆಯ ವಿಧೇಯಕ ಸಂಖ್ಯೆ 32, ಕಡತ ಸಂಖ್ಯೆ:ಸಂವ್ಯಶಾಇ 39 ಶಾಸನ 2016)

(ಭಾರತ ಸಂವಿಧಾನದ 246ನೆಯ ಅನುಚ್ಛೇದದಡಿಯಲ್ಲಿ ಹಾಗೂ 7ನೇ ಅನುಸೂಚಿಯ 2ನೇ ಹಾಗೂ 3ನೇ ಪಟ್ಟಿಯ ವಿಷಯಗಳ ಅಡಿಯಲ್ಲಿ ಬರುತ್ತದೆ.)

**2017ರ ಕರ್ನಾಟಕ ಅಧಿನಿಯಮ ಸಂಖ್ಯೆ: 04**

(2017ರ ಜನವರಿ ತಿಂಗಳ 4ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಕೆಲವು ಸ್ಥಳಗಳ ಹೆಸರುಗಳನ್ನು ಬದಲಾಯಿಸುವ ಅಧಿನಿಯಮ, 2016**

(2016ರ ಡಿಸೆಂಬರ್ ತಿಂಗಳ 31ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮೋದನೆಯನ್ನು ಪಡೆಯಲಾಗಿದೆ)

ಕರ್ನಾಟಕ ರಾಜ್ಯದಲ್ಲಿನ ಬೆಂಗಳೂರು ನಗರದ ಮತ್ತು ಕೆಲವು ಇತರ ಸ್ಥಳಗಳ ಹೆಸರನ್ನು ಬದಲಾಯಿಸಲು ಕೆಲವು ಕಾನೂನುಗಳನ್ನು ತಿದ್ದುಪಡಿ ಮಾಡುವುದಕ್ಕಾಗಿ ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯದಲ್ಲಿನ ಬೆಂಗಳೂರು ನಗರದ ಮತ್ತು ಕೆಲವು ಇತರ ಸ್ಥಳಗಳ ಹೆಸರನ್ನು ಬದಲಾಯಿಸಲು ಕೆಲವು ಕಾನೂನುಗಳನ್ನು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಕೆಲವು ಸ್ಥಳಗಳ ಹೆಸರುಗಳನ್ನು ಬದಲಾಯಿಸುವ ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪರಿಭಾಷೆ.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯತಾ ಅಗತ್ಯಪಡಿಸಿದ ಹೊರತು, "ಕಾನೂನು" ಎಂಬುದು, ಕಾನೂನನ್ನು ಮಾಡಲು ಕರ್ನಾಟಕ ವಿಧಾನಮಂಡಲವು ಸಕ್ಷಮವಾಗಿರುವ ಕರ್ನಾಟಕ ರಾಜ್ಯದಲ್ಲಿ ಸಮಗ್ರವಾಗಿ ಅಥವಾ ಯಾವುದೇ ಭಾಗದಲ್ಲಿ ಕಾನೂನಾಗಿ ಜಾರಿಯಲ್ಲಿರುವ ಯಾವುದೇ ಅಧಿನಿಯಮ, ಅಧ್ಯಾದೇಶ, ವಿನಿಯಮ, ಆದೇಶ, ಉಪವಿಧಿ, ನಿಯಮ, ಸ್ಕೀಮು, ಅಧಿಸೂಚನೆ ಅಥವಾ ಇತರ ಲಿಖಿತಗಳನ್ನು ಒಳಗೊಳ್ಳುತ್ತದೆ.

**3. ಹೆಸರುಗಳ ಬದಲಾವಣೆ.-** ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಮತ್ತು ಆ ದಿನಾಂಕದಿಂದ, ರಾಜ್ಯದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಕಂಡುಬರುವ, ಅನುಸೂಚಿಯ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಸ್ಥಳಗಳ ಹೆಸರುಗಳಿಗೆ ಅದಕ್ಕೆ ಸಂವಾದಿಯಾಗಿ (3)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಹೆಸರುಗಳನ್ನು ಪ್ರತಿಯೋಜಿಸತಕ್ಕದ್ದು.

**4. ಉಲ್ಲೇಖಗಳ ಅರ್ಥೈಸುವಿಕೆ.-** ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, ಅನುಸೂಚಿಯ (2)ನೇ ಅಂಕಣದಲ್ಲಿ ಉಲ್ಲೇಖಿಸಿದ, ಯಾವುದೇ ಕಾನೂನಿನಲ್ಲಿ ಕಂಡುಬರುವ ಸ್ಥಳಗಳ ಹೆಸರುಗಳ ಯಾವುದೇ ಉಲ್ಲೇಖವು, ಈ ಅಧಿನಿಯಮವು ಪ್ರಾರಂಭವಾದ ತರುವಾಯ, ಅದರ (3)ನೇ ಅಂಕಣದಲ್ಲಿ ಉಲ್ಲೇಖಿಸಲಾದ ಸಂವಾದಿ ಸ್ಥಳಗಳಿಗೆ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**5. ಸಿಂಧುತ್ವ ಮತ್ತು ಉಳಿಸುವಿಕೆಗಳು.-** ಅನುಸೂಚಿಯ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸ್ಥಳಗಳ ಸಂಬಂಧದಲ್ಲಿ (3)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಹೆಸರುಗಳನ್ನು ತಿದ್ದುಪಡಿ ಮಾಡುವ 3ನೇ ಪ್ರಕರಣದಲ್ಲಿರುವುದಾವುದೂ, ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಅವು ಅಸ್ತಿತ್ವದಲ್ಲಿರುವಂತೆ ರಾಜ್ಯದ ಯಾವುವೇ ಅಧಿನಿಯಮಗಳ ಅಡಿಯಲ್ಲಿ ಹೊರಡಿಸಲಾದ ಯಾವುದೇ ಅಧಿಸೂಚನೆ, ಆದೇಶ, ನಿಯಮ ಅಥವಾ ಉಪವಿಧಿಗಳ ಅಥವಾ ಮಾಡಲಾದ ಅಥವಾ ಯಾವುದನ್ನಾದರೂ ಕೈಗೊಂಡ ಅಥವಾ ಬಾಧಕವಾದ ಅಥವಾ ಅಂಥ ಯಾವುದೇ ಕಾನೂನಿನ ಅಡಿಯಲ್ಲಿ ಈಗಾಗಲೇ ಆರ್ಜನೆಯಾಗಿರುವ, ಪ್ರಾಪ್ತವಾದ ಅಥವಾ ವಹಿಸಿರುವ ಯಾವುದೇ ಹಕ್ಕು, ವಿಶೇಷ ಸವಲತ್ತು, ಬಾಧ್ಯತೆ ಅಥವಾ ಹೊಣೆಗಾರಿಕೆಗಳ ಪೂರ್ವ ಕಾರ್ಯಾಚರಣೆಗೆ ಬಾಧಕವಾಗತಕ್ಕದ್ದಲ್ಲ.

**ಅನುಸೂಚಿ**

**(3 ಮತ್ತು 4ನೇ ಪ್ರಕರಣವನ್ನು ನೋಡಿ)**

| **ಕ್ರಮ ಸಂಖ್ಯೆ** | **ಅಸ್ತಿತ್ವದಲ್ಲಿರುವ ಸ್ಥಳಗಳ ಹೆಸರುಗಳು ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ** | **ಬದಲಾಯಿಸಿದ ಸ್ಥಳಗಳ ಹೆಸರುಗಳು ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ** |
|---|---|---|
| (1) | (2) | (3) |
| 1. | ಬೆಂಗಳೂರು-BANGALORE | ಬೆಂಗಳೂರು-BENGALURU |
| 2. | ಮಂಗಳೂರು-MANGALORE | ಮಂಗಳೂರು-MANGALURU |
| 3. | ಬೆಳ್ಳಾರಿ-BELLARY | ಬಳ್ಳಾರಿ- BALLARI |
| 4. | ಬಿಜಾಪುರ-BIJAPUR | ವಿಜಯಪುರ-VIJAYAPURA |

| | | |
|---|---|---|
| 5. | ಬೆಳಗಾಂ–BELGAUM | ಬೆಳಗಾವಿ–BELAGAVI |
| 6. | ಚಿಕ್ಕಮಗಳೂರು–CHIKMAGALUR | ಚಿಕ್ಕಮಗಳೂರು–CHIKKAMAGALURU |
| 7. | ಗುಲಬರ್ಗಾ–GULBARGA | ಕಲಬುರಗಿ–KALABURAGI |
| 8. | ಮೈಸೂರು–MYSORE | ಮೈಸೂರು–MYSURU |
| 9. | ಹೊಸಪೇಟೆ–HOSPET | ಹೊಸಪೇಟೆ–HOSAPETE |
| 10. | ಶಿಮೊಗ–SHIMOGA | ಶಿವಮೊಗ್ಗ–SHIVAMOGGA |
| 11. | ಹುಬ್ಳಿ–HUBLI | ಹುಬ್ಬಳ್ಳಿ–HUBBALLI |
| 12. | ತುಮಕೂರ್–TUMKUR | ತುಮಕೂರು–TUMAKURU |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಕೆ.ದ್ವಾರಕನಾಥ್ ಬಾಬು**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳ ಇಲಾಖೆ